ದಿನಾಂಕಃ **23.6.2026** ಎಂ.ವಿ.ಸಿ. ನಂಃ **360/2025** ಪಿಡಬ್ಲೂಃ **1**

ಸಾಕ್ಷಿಯನ್ನು ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ನೇ ಎದುರುದಾರರ ಪರವಾಗಿ ಶ್ರೀ ಎ ಬಿ ಎ ಲ್ ವಕೀಲರಿಂದ

ಆ ದಿವಸ ನಾನು ಎದುರುದಾರರ ಬಸ್ಸಿನಲ್ಲಿ ಬಳ್ಳಾರಿಗೆ ಪ್ರಯಾಣ ಮಾಡುತ್ತಿದ್ದ ಬಗ್ಗೆ ಟಿಕೆಟ್ ಹಾಜರು ಮಾಡಿಲ್ಲ. ಅಪಘಾತ ಬೆಂಗಳೂರು ರಸ್ತೆಯ ಹಲಕುಂದಿ ಯಲ್ಲಿ ನಡೆದಿದೆ ಎಂದರೆ ಸರಿ. ಬಸ್ಸಿನ ಮುಂಭಾಗದಲ್ಲಿ ಒಂದು ಖಾಸಗಿ ಲಾರಿ ಹೋಗುತ್ತಿತ್ತು ಎಂದರೆ ಸರಿ. ಅಪಘಾತಕ್ಕೆ ಬಸ್ ಚಾಲಕನ ಯಾವುದೆ ತಪ್ಪು ಇಲ್ಲ ಎಂದರೆ ಸರಿಯಲ್ಲ.

ಅಪಘಾತದ ನಂತರ ವಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಆಸ್ಪತ್ರೆಯಲ್ಲಿ ನಾನು ಸುಮಾರು 3 ದಿವಸ ದಾಖಲಾಗಿದ್ದೆ. ಅಲ್ಲಿ ಉಚಿತ ಚಿಕಿತ್ಸೆ ನೀಡಿದ್ದಾರೆ ಎಂದರೆ ಸರಿ. ನಾನು ಗುಣಮುಖನಾದ ಕಾರಣ ಆಸ್ಪತ್ರೆಯಿಂದ ಬಿಡುಗಡೆ ಮಾಡಿದ್ದಾರೆ ಎಂದರೆ ಸರಿ. ಆದರೆ ಖಾಸಗಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೇನೆ.

ನನಗೆ ಈಗ 62 ವರ್ಷ ವಯಸ್ಸು ಎಂದರೆ ಸರಿ. ನಾನು ಅಪಘಾ,ಚಿತಕ್ಕೆ ಮೊದಲು ಯಾವುದೆ ಕೇಸ ಮಾಡುತ್ತಿರಲಿಲ್ಲ ಮನೆಯಲ್ಲೇ ಇರುತ್ತಿದ್ದೆ ಎಂದರೆ ಸರಿಯಲ್ಲ. ನಾನು ಕೂಲಿ ಕೆಲಸ ಮಾಡುತ್ತಾ ದಿನಕ್ಕೆ ರೂ. 1 ಸಾವಿರ ದುಡಿಯತ್ತಿದ್ದೆ ಎಂದು ಸುಳ್ಳ ಬರೆಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದದಿಂದ ಯಾವುದೆ ತೊಂದರೆ ಆಗಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ನನ್ನ ದೈನಂದಿನ ಕೆಲಸ ಕಾರ್ಯಗಳನ್ನುಯಾವುದೆ ತೊಂದರೆ ಇಲ್ಲದೇ ಮಾಡಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೆ ನ್ಯೂನ್ಯತೆ ಇಲ್ಲದೇ ಇದ್ದರೂ ಸಹ ಕೇಲವ ಹೆಚ್ಚಿನ ಪರಿಹಾರಕ್ಕಾಗಿ ವೈದ್ಯರ ಜೊತೆ ಶಾಮಿಲಾಗಿ ಸುಳ್ಳು ದೃಢೀಕರಣ ಪತ್ರ ಪಡೆದು ತಂದು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ಔಷಧಕ್ಕಾಗಿ ರೂ . 50 ಸಾವಿರ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೆ ತೊಂದರೆ ಆಗದರೆ ಇದ್ದರೂ ಸಹ ಕೇವಲ ಪರಿಹಾರಕ್ಕಾರಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಶೇಷ ನ್ಯಾಯಾಲಯ, ಬಳ್ಳಾರಿ.